# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1196
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ
ಉತ್ತರಿಸುವ ದಿನಾಂಕ : 15-12-2023
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೀಸಲಾತಿಯ ಗೊಂದಲದಿಂದಾಗಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ನೇಮಕಾತಿ ಪ್ರಕ್ರಿಯೆಗಳು ನನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ರೋಸ್ಟರ್‌ನ್ನು ಮೀಸಲಾತಿಗೆ ಅಳವಡಿಸಲು ನಿರ್ಧರಿಸಲಾಗಿದೆಯೇ; (ವಿವರ ನೀಡುವುದು) | ನೇರ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ:28.08.2022 ರನ್ವಯ ರೋಸ್ಟರ್ ಬಿಂದುಗಳನ್ನು ಗುರುತಿಸಿ, ಆದೇಶ ಹೊರಡಿಸಲಾಗಿದೆ. ಅದೇ ರೀತಿ ಮುಂಬಡ್ತಿಗೂ ಸಹ ಸಿಆಸುಇ 02 ಸೇಇಮ 2022, ದಿನಾಂಕ:28.12.2022 ರಲ್ಲಿ ರೋಸ್ಟರ್ ಬಿಂದುಗಳನ್ನು ಗುರುತಿಸಿ ಆದೇಶ ಹೊರಡಿಸಲಾಗಿದೆ. ಅಲ್ಲದೇ, ಮುಂಬಡ್ತಿಗೆ ಸಂಬಂಧಿಸಿದಂತೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಹೆಚ್ಚುವರಿ ರೋಸ್ಟರ್ ಬಿಂದುಗಳನ್ನು ಗುರುತಿಸಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 266 ಸೇನೇನಿ 2022, ದಿನಾಂಕ:28.11.2023ರಲ್ಲಿಯೂ ಸಹ ಆದೇಶ ಹೊರಡಿಸಲಾಗಿದೆ. ಅದರಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬಹುದು. |
| ಆ) | ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ವಿಳಂಬದಿಂದಾಗಿ ಆಡಳಿತ ನಿರ್ವಹಣೆಗೆ ತೊಂದರೆ ಉಂಟಾಗುವುದಿಲ್ಲವೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ರೋಸ್ಟರ್‌ನ್ನು ನಿಗದಿಪಡಿಸಲಾಗುವುದು; | |
| ಇ) | ಮೀಸಲಾತಿ ನಿಗದಿಗಾಗಿ ಜಾತಿ ಜನಗಣತಿಯನ್ನು ಪರಿಗಣಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಹಳೆ ಜಾತಿಗಣತಿ ವರದಿಯನ್ನು ಪರಿಷ್ಕರಿಸಲಾಗುತ್ತದೆಯೇ; ಅಥವಾ ಪರಿಷ್ಕೃತ ಜಾತಿ ಗಣತಿಯನ್ನು ಪರಿಷ್ಕರಿಸಲಾಗುತ್ತದೆಯೇ; ಸ್ಪಷ್ಟ ವಿವರ ನೀಡುವುದು? | ಭಾರತ ಸಂವಿಧಾನದ ಅನುಚ್ಛೇಧ 16 ರನ್ವಯ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ಮೀಸಲಾತಿಯನ್ನು ನಿಗಧಿಪಡಿಸಲಾಗಿದೆ. ಆದರೆ, ಜನಸಂಖ್ಯೆಯ ಅನುಪಾತದ ಆಧಾರದ ಮೇಲೆ ಅಲ್ಲ. |

**SWD/487/SLP/2023**

(**ಡಾ.ಹೆಚ್.ಸಿ.ಮಹದೇವಪ್ಪ**)
ಸಮಾಜ ಕಲ್ಯಾಣ ಸಚಿವರು.